ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):-

(ಅ) ಕಿತ್ತೂರಿನಲ್ಲಿ ವಿಶೇಷ ತಹಶೀಲ್ದಾರರ ಕಛೇರಿ ಕಾರ್ಯ ನಿರ್ವಹಿಸುತ್ತಿದೆ

(ಆ) ಇಲ್ಲ

(ಇ) ಇತರ ತಾಲ್ಲೂಕುಗಳ ಪುನರ್ ರಚನೆ ಪ್ರಸ್ತಾವನೆಗಳ ಜೊತೆಗೆ ಇದನ್ನೂ ಪರಿಶೀಲಿಸಲಾಗುವುದು.

849. **ಶ್ರೀ ಬಾಲರಾಜ್ ಎಸ್.** :- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕೊಳ್ಳೇಗಾಲ ಕ್ಷೇತ್ರದಲ್ಲಿ ಗ್ರಾನೈಟ್ ಪಾರ್ಕ್ ನಿರ್ಮಿಸಿ ಕೊಡುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಗ್ರಾನೈಟ್ ಪಾರ್ಕ್ ನಿರ್ಮಿಸುವ ಕಾರ್ಯ ಯಾವ ಹಂತದಲ್ಲಿದೆ;

(ಇ) ಅದನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ;

(ಈ) ಹಾಗಿದ್ದಲ್ಲಿ, ಈ ಸಾಲಿನಲ್ಲಿ ಪ್ರಾರಂಭಿಸಲಾಗುವುದೇ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

(ಅ) ಹೌದು

(ಆ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ (ಕೆಎಸ್ಎಸ್ಐಡಿಸಿ) ರವರು ಕೊಳ್ಳೇಗಾಲ ತಾಲ್ಲೂಕಿನಲ್ಲಿ 2ನೇ ಹಂತದ ಕೈಗಾರಿಕಾ ವಸಾಹತು ಸ್ಥಾಪನೆ ಮಾಡಿ ಅದರಲ್ಲಿ ಗ್ರಾನೈಟ್ ಪಾರ್ಕ್ ಸ್ಥಾಪಿಸುವ ಪ್ರಸ್ತಾವನೆ ಇರುತ್ತದೆ. ಇದಕ್ಕಾಗಿ ಕೊಳ್ಳೇಗಾಲ-ಮಳವಳ್ಳಿ ಹೆದ್ದಾರಿಯಲ್ಲಿ ಕೊಳ್ಳೇಗಾಲದಿಂದ ಸುಮರು 8 ಕಿ.ಮೀ. ದೂರದಲ್ಲಿರುವ ಧನಗೆರೆ ಎಂಬ ಗ್ರಾಮದ ಪಕ್ಕದಲ್ಲಿ ಸುಮಾರು 40 ಎಕರೆ ಸರ್ಕಾರಿ ಜಮೀನನ್ನು ಗುರುತಿಸಲಾಗಿತ್ತು. ಸದರಿ ಜಾಗವು ಕೊಳ್ಳೇಗಾಲದಿಂದ ದೂರವಾಗಿರುವುದರಿಂದ ಹತ್ತಿರವಿರುವ ಸೂಕ್ತ ಸರ್ಕಾರಿ/ಖಾಸಗಿ ಜಮೀನುಗಳ ಲಭ್ಯತೆ ಬಗ್ಗೆ ಸರ್ವೇಕ್ಷಣೆ ನಡೆಸಲಾಗುತ್ತಿದೆ.

(ಇ) ಇದೆ

(ಈ) ಗ್ರಾನೈಟ್ ಪಾರ್ಕ್ ನಿರ್ಮಿಸಲು ಬೇಕಾಗುವ ಸೂಕ್ತ ಸರ್ಕಾರಿ/ಖಾಸಗಿ ಜಮೀನು ದೊರೆತ ಕೂಡಲೇ ಕೈಗಾರಿಕಾ ವಸಾಹತು ಅಭಿವೃದ್ಧಿಪಡಿಸಿ ಗ್ರಾನೈಟ್ ಪಾರ್ಕ್ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು.